# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | **735*** |
| ಸದಸ್ಯರ ಹೆಸರು | ಶ್ರೀ ಮಂಜುನಾಥ ಭಂಡಾರಿ |
| ಉತ್ತರಿಸುವ ದಿನಾಂಕ | 21-02-2024 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಇರುವ ಅನುವಂಶಿಕ ಮೊಕ್ತೇಸರ ಆಡಳಿತದಲ್ಲಿ ಇರುವ ದೇವಸ್ಥಾನಗಳ/ ದೈವಸ್ಥಾನಗಳು ಯಾವುವು: ಅನುವಂಶಿಕ ಮೊಕ್ತೇಸರ ಹಾಗೂ ಸಮಿತಿ ಸದಸ್ಯರ ವಿವರ ಸಹಿತ ದೇವಸ್ಥಾನಗಳ ಮಾಹಿತಿ ನೀಡುವುದು: | ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ ಅಧಿಸೂಚಿತ ದೇವಾಲಯಗಳಿಗೆ ಸಂಬಂಧಿಸಿದಂತೆ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಅನುವಂಶಿಕ ಮೊಕ್ತೇಸರರು ಕರ್ತವ್ಯ ನಿರ್ವಹಿಸುತ್ತಿರುವ ದೇವಸ್ಥಾನ/ ದೈವಸ್ಥಾನಗಳ ವಿವರ ಈ ಕೆಳಕಂಡಂತಿದೆ.<br><br>**ಕ್ರ. ಸಂ** / **ಜಿಲ್ಲೆಯ ಹೆಸರು** / **ದೇವಸ್ಥಾನ/ ದೈವಸ್ಥಾನಗಳ ಸಂಖ್ಯೆ**<br>1. ದಕ್ಷಿಣ ಕನ್ನಡ — 51<br>2. ಉಡುಪಿ — 23<br>**ಒಟ್ಟು — 74**<br><br>ಅನುವಂಶಿಕ ಮೊಕ್ತೇಸರರ ವಿವರ ಸಹಿತ ದೇವಸ್ಥಾನಗಳ ಮಾಹಿತಿಯನ್ನು **ಅನುಬಂಧ-1 ರಲ್ಲಿ** ಒದಗಿಸಿದೆ.<br>ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ-2011ರ ಕಲಂ 25-ಎ ರನ್ವಯ ವಂಶಪಾರಂಪರ್ಯ ನ್ಯಾಸಧಾರಿಗಳು ಮಾತ್ರವೇ ನಿರ್ವಹಿಸುವ ಅಧಿಸೂಚಿತ ಸಂಸ್ಥೆಗಳಿಗೆ ವ್ಯವಸ್ಥಾಪನಾ ಸಮಿತಿಯನ್ನು ರಚಿಸಲು ಅವಕಾಶ ಇರುವುದಿಲ್ಲ. ಆದ್ದರಿಂದ ಸದರಿ ದೇವಸ್ಥಾನಗಳಲ್ಲಿ ವ್ಯವಸ್ಥಾಪನಾ ಸಮಿತಿ ಇರುವುದಿಲ್ಲ. |
| ಆ) | ಈ ಅನುವಂಶಿಕ ದೇವಸ್ಥಾನಗಳಿಗೆ ಸರ್ಕಾರದಿಂದ ಸಮಿತಿ ರಚಿಸುವ ಹಕ್ಕು ಇದೆಯೇ; ಈ ಅವಕಾಶವನ್ನು ಸರ್ಕಾರ ಹಿಂಪಡೆದಿದೆಯೇ; ಈ ನಿಯಮಗಳನ್ನು ಯಾವಾಗ ಬದಲಾಯಿಸಿದೆ; (ವಿವರ ನೀಡುವುದು) | ರಾಜ್ಯದಲ್ಲಿ ದಿನಾಂಕ:01.05.2003 ರಿಂದ ಜಾರಿಗೆ ಬಂದಿರುವ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ-1997ರಲ್ಲಿ ಅನುವಂಶಿಕ ಆಡಳಿತಕ್ಕೆ ಒಳಪಡುವ ದೇವಾಲಯಗಳಿಗೆ ವ್ಯವಸ್ಥಾಪನಾ ಸಮಿತಿಯನ್ನು ರಚಿಸುವ ಬಗ್ಗೆ ಯಾವುದೇ ಸ್ಪಷ್ಟತೆ ಇರುವುದಿಲ್ಲ.<br><br>ಆದ್ದರಿಂದ ಸರ್ಕಾರವು ದಿನಾಂಕ:04.05.2011 ರಿಂದ ಅನ್ವಯವಾಗುವಂತೆ ಜಾರಿಗೆ ತಂದಿರುವ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ-2011ರ ಕಲಂ 25(ಎ)ರನ್ವಯ ಅನುವಂಶಿಕ ಮೊಕ್ತೇಸರರು ಮಾತ್ರವೇ ನಿರ್ವಹಿಸುವ ಅಧಿಸೂಚಿತ ಸಂಸ್ಥೆಗಳಿಗೆ ವ್ಯವಸ್ಥಾಪನಾ ಸಮಿತಿಯನ್ನು ರಚಿಸಲು ಅವಕಾಶವನ್ನು ಕಲ್ಪಿಸಿರುವುದಿಲ್ಲ ಹಾಗೂ ಸದರಿ ಅಧಿಸೂಚಿತ ಸಂಸ್ಥೆಗಳ ಆಡಳಿತದ ಅಧಿಕಾರವು ಅನುವಂಶಿಕ ಮೊಕ್ತೇಸರರಿಕೆ ಮಾತ್ರ ಇರುತ್ತದೆ. |

| | | |
|---|---|---|
| ಇ) | ಅನುವಂಶಿಕ ದೇವಸ್ಥಾನಗಳಿಗೆ ಸರ್ಕಾರದಿಂದ ನಿರ್ವಹಣಾ ಮತ್ತು ಅಭಿವೃದ್ಧಿ ಅನುದಾನ ನೀಡಲಾಗುತ್ತಿದೆಯೇ: ನೀಡಲಾಗುತ್ತಿದ್ದರೆ, ಅನುದಾನ ಮೊತ್ತವೆಷ್ಟು: ಅನುವಂಶಿಕ ದೇವಸ್ಥಾನಗಳ ಲೆಕ್ಕ ಪತ್ರಗಳನ್ನು ನಿರ್ವಹಿಸುವವರು ಯಾರು ಹಣಕಾಸಿನ ನಿರ್ವಹಣೆಯ ಜವಾಬ್ದಾರಿಯನ್ನು ಯಾರು ನಿರ್ವಹಿಸುತ್ತಿದ್ದಾರೆ: ಯಾವ ಸಂಸ್ಥೆಯಿಂದ ಈ ಲೆಕ್ಕಪತ್ರಗಳ ನಿಯಮಿತ ತಪಾಸಣೆ (ಅಡಿಟ್) ನಡೆಯುತ್ತಿದೆ: ಈ ಕುರಿತ ಮಾಹಿತಿ ಸರ್ಕಾರದ ಬಳಿಯಿದೆಯೇ: (ವಿವರ ನೀಡುವುದು) | • ಅನುವಂಶಿಕ ಮೊಕ್ತೇಸರರು ಕರ್ತವ್ಯ ನಿರ್ವಹಿಸುತ್ತಿರುವ ದೇವಸ್ಥಾನಗಳಲ್ಲಿ ಸಂಗ್ರಹವಾಗುವ ಹಣವನ್ನು ಆಯಾಯ ದೇವಸ್ಥಾನಗಳ ಬ್ಯಾಂಕು ಖಾತೆಗಳಿಗೆ ಜಮೆ ಮಾಡಲಾಗುತ್ತದೆ ಹಾಗೂ ಸದರಿ ಹಣವನ್ನು ದೇವಾಲಯದ ನಿರ್ವಹಣೆ ಮತ್ತು ಅಭಿವೃದ್ಧಿಗೆ ಬಳಸಿಕೊಳ್ಳಲಾಗುತ್ತದೆ.<br><br>• ಇನಾಂ ರದ್ದಿಯಾತಿ ಕಾಯ್ದೆಗಳಡಿಯಲ್ಲಿ ಇನಾಂ ಜಮೀನುಗಳನ್ನು ಕಳೆದುಕೊಂಡ ದೇವಸ್ಥಾನ ಗಳಿಗೆ ಸರ್ಕಾರದಿಂದ ಕಾಲ ಕಾಲಕ್ಕೆ ಪರಿಷ್ಕರಿಸಲಾಗುವ ತಸ್ತೀಕ್ ಅನುದಾನವನ್ನು ಹಾಗೂ ಕರ್ನಾಟಕ ಭೂ ಸುಧಾರಣೆ ಕಾಯ್ದೆಗಳಡಿಯಲ್ಲಿ ಇನಾಂಯೇತರ ಜಮೀನುಗಳನ್ನು ಕಳೆದುಕೊಂಡ ದೇವಾಲಯಗಳಿಗೆ ವರ್ಷಾಸನ ಅನುದಾನಗಳನ್ನು ನೀಡಲಾಗುತ್ತಿದೆ. ಪ್ರಸಕ್ತ ವಾರ್ಷಿಕ ರೂ.60,000/-ಗಳ ತಸ್ತೀಕ್ ಮತ್ತು ವರ್ಷಾಸನವನ್ನು ಧಾರ್ಮಿಕ ಸಂಸ್ಥೆಗಳಿಗೆ ನೀಡಲಾಗುತ್ತಿದೆ.<br><br>• ಆಡಳಿತ ಮೊಕ್ತೇಸರರನ್ನು ಹೊಂದಿರುವ ದೇವಸ್ಥಾನಗಳಿಗೆ ಕಳೆದ 5 ವರ್ಷಗಳಲ್ಲಿ ಸದರಿ ಸಂಸ್ಥೆಗಳಿಗೆ ಸಾಮಾನ್ಯ ಯೋಜನೆಯಡಿ ಬಿಡುಗಡೆಯಾದ ಅನುದಾನದ ವಿವರ **ಅನುಬಂಧ-2 ರಲ್ಲಿ** ಒದಗಿಸಿದೆ.<br><br>• ಅನುವಂಶಿಕ ಮೊಕ್ತೇಸರರು ಕರ್ತವ್ಯ ನಿರ್ವಹಿಸುತ್ತಿರುವ ದೇವಸ್ಥಾನಗಳ ಹಣಕಾಸಿನ ನಿರ್ವಹಣೆಯ ಜವಾಬ್ದಾರಿಯನ್ನು ಹಾಗೂ ಲೆಕ್ಕ ಪತ್ರಗಳನ್ನು ಅನುವಂಶಿಕ ಮೊಕ್ತೇಸರರೇ ನಿರ್ವಹಿಸುತ್ತಾರೆ.<br><br>• ಐದು ಲಕ್ಷ ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಿನ ಒಟ್ಟು ವಾರ್ಷಿಕ ಆದಾಯವಿರುವ ಅನುವಂಶಿಕ ದೇವಸ್ಥಾನಗಳ ಲೆಕ್ಕಪತ್ರಗಳ ತಪಾಸಣೆಗಳನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ರ ಕಲಂ 37 ರನ್ವಯ ರಾಜ್ಯ ಲೆಕ್ಕ ಪರಿಶೋಧನಾ ಇಲಾಖೆ/ ಸ್ಥಳೀಯ ಲೆಕ್ಕ ಪರಿಶೋಧನ ವರ್ತುಲ ಇವರಿಂದ ಕಾಲ ಕಾಲಕ್ಕೆ ಲೆಕ್ಕ ತಪಾಸಣೆಗೆ ಒಳಪಡಿಸಲಾಗುತ್ತದೆ. |
| ಈ) | ಅನುವಂಶಿಕ ದೇವಸ್ಥಾನಗಳಲ್ಲಿ ಸಾರ್ವಜನಿಕರು ವಿವಿಧ ರೀತಿಯಲ್ಲಿ ದೇಣಿಗೆ ನೀಡುತ್ತಿದ್ದು, ಅದು ಸದುಪಯೋಗವಾಗುತ್ತಿರುವ ಬಗ್ಗೆ ಖಚಿತಪಡಿಸಿ ಕೊಳ್ಳುವ ಯಾವುದಾದರೂ ವ್ಯವಸ್ಥೆಯಿದೆಯೇ: (ವಿವರ ನೀಡುವುದು) | 1) ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮಗಳು 2002ರ ನಿಯಮ 3 ರಡಿಯಲ್ಲಿ ಪ್ರವರ್ಗ 'ಎ' ದೇವಸ್ಥಾನಗಳಿಗೆ ಧಾರ್ಮಿಕ ದತ್ತಿ ಆಯುಕ್ತರು, ಪ್ರವರ್ಗ 'ಬಿ' ದೇವಸ್ಥಾನಗಳಿಗೆ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಹಾಗೂ ಪ್ರವರ್ಗ 'ಸಿ' ದೇವಸ್ಥಾನಗಳಿಗೆ ಸಂಬಂಧಪಟ್ಟ ಧಾರ್ಮಿಕ ದತ್ತಿ ಸಹಾಯಕ ಆಯುಕ್ತರು/ ಸಂಬಂಧಪಟ್ಟ ಉಪವಿಭಾಗಾಧಿಕಾರಿಗಳು ನಿಯಮಿಸಲಾದ ಪ್ರಾಧಿಕಾರಿಗಳಾಗಿರುತ್ತಾರೆ.<br><br>2) ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ಅನುವಂಶಿಕ ದೇವಸ್ಥಾನಗಳಿಗೆ ಸಂಬಂಧಿಸಿದಂತೆ, ಪ್ರತಿ ವರ್ಷ ಆಯವ್ಯಯವನ್ನು ಸಂಬಂಧಪಟ್ಟ ನಿಯಮಿಸಲಾದ ಪ್ರಾಧಿಕಾರದಿಂದ ಮಂಜೂರು |

| | | |
|---|---|---|
| | | ಮಾಡಿಸಿಕೊಳ್ಳುವ ಮೂಲಕ ದೇವಾಲಯದ ನಿರ್ವಹಣೆಯನ್ನು ಮಾಡಲಾಗಿರುತ್ತದೆ.<br><br>3) ಸದರಿ ಧಾರ್ಮಿಕ ಸಂಸ್ಥೆಗಳಿಗೆ ಸಾರ್ವಜನಿಕರು ವಿವಿಧ ರೀತಿಯಲ್ಲಿ ನೀಡುತ್ತಿರುವ ದೇಣಿಗೆಯು ಸದುಪಯೋಗವಾಗುತ್ತಿರುವ ಬಗ್ಗೆ ಸದರಿ ದೇವಾಲಯಗಳ ಅನುವಂಶಿಕ ಮೊಕ್ತೇಸರರು ಖಚಿತ ಪಡಿಸಿಕೊಂಡು ನಿಯಮಿಸಲಾದ ಪ್ರಾಧಿಕಾರಿಗಳ ಮೇಲು ಉಸ್ತುವಾರಿಯಲ್ಲಿ ಸೂಕ್ತ ಆಡಳಿತ ಮತ್ತು ನಿರ್ವಹಣೆಯನ್ನು ನೀಡುವಂತಹ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ. |
| ಉ) | ಅನುವಂಶಿಕ ದೇವಸ್ಥಾನಗಳಿಗೆ ಸರ್ಕಾರದಿಂದ ಪ್ರತಿನಿಧಿಯನ್ನು ಅಥವಾ ಸಮಿತಿಯನ್ನು ನೇಮಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ: ಹಾಗಿದ್ದಲ್ಲಿ, ಯಾವಾಗ ನೇಮಿಸಲಾಗುವುದು: (ವಿವರ ನೀಡುವುದು) | ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ-2011ರ ಕಲಂ 25-ಎ ರನ್ವಯ ವಂಶಪಾರಂಪರ್ಯ ನ್ಯಾಸಧಾರಿಗಳು ಮಾತ್ರವೇ ನಿರ್ವಹಿಸುವ ಅಧಿಸೂಚಿತ ಸಂಸ್ಥೆಗಳ ಸಂಬಂಧದಲ್ಲಿ ವ್ಯವಸ್ಥಾಪನಾ ಸಮಿತಿಯನ್ನು ರಚಿಸಲು ಅವಕಾಶ ಕಲ್ಪಿಸದೇ ಇರುವುದರಿಂದ ಸದರಿ ದೇವಸ್ಥಾನಗಳಲ್ಲಿ ವ್ಯವಸ್ಥಾಪನಾ ಸಮಿತಿ ಇರುವುದಿಲ್ಲ. |
| ಊ) | ಅನುವಂಶಿಕ ದೇವಸ್ಥಾನಗಳಿಗೆ ಆಡಳಿತ ಸಮಿತಿ ಹಾಗೂ ಅಭಿವೃದ್ಧಿ ಸಮಿತಿ ರಚಿಸಲು ಅವಕಾಶವಿದೆಯೇ: ಇದ್ದಲ್ಲಿ, ಸಮಿತಿ ರಚನೆಯ ನಿಯಮಗಳೇನು: ಇಲ್ಲದಿದ್ದಲ್ಲಿ, ಈ ಸಮಿತಿಗಳನ್ನು ರಚಿಸುವ ಆಲೋಚನೆ ಸರ್ಕಾರಕ್ಕೆ ಇದೆಯೇ: (ವಿವರ ನೀಡುವುದು) | 1) ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ-2011ರ ಕಲಂ 25(ಎ) ರನ್ವಯ ವಂಶಪಾರಂಪರ್ಯ ನ್ಯಾಸಧಾರಿಗಳು ಮಾತ್ರವೇ ನಿರ್ವಹಿಸುವ ಅಧಿಸೂಚಿತ ಸಂಸ್ಥೆಗಳ ಸಂಬಂಧದಲ್ಲಿ ವ್ಯವಸ್ಥಾಪನಾ ಸಮಿತಿಯನ್ನು ರಚಿಸಲು ಅವಕಾಶ ಕಲ್ಪಿಸದೇ ಇರುವುದರಿಂದ ಸದರಿ ದೇವಸ್ಥಾನಗಳಲ್ಲಿ ವ್ಯವಸ್ಥಾಪನಾ ಸಮಿತಿ ಇರುವುದಿಲ್ಲ.<br><br>2) ಅನುವಂಶಿಕ ಆಡಳಿತ ಹೊಂದಿರುವ ದೇವಸ್ಥಾನಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ನಿಯಮಗಳು, 2012 ರ ನಿಯಮ 40(ಬಿ)' ಪ್ರಕಾರ ಅಭಿವೃದ್ಧಿ ಸಮಿತಿಯನ್ನು ರಚಿಸಲು ಅವಕಾಶವಿರುತ್ತದೆ. |

ಸಂಖ್ಯೆ: ಕಂಇ 31 ಮುಸಪ್ರ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:735 ಅನುಬಂಧ-1**

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಧಾರ್ಮಿಕ ದತ್ತಿ ಇಲಾಖೆಯ ಅನುವಂಶಿಕ ಮೊಕ್ತೇಸರರ ಆಡಳಿತಕ್ಕೆ ಒಳಪಡುವ ದೇವಾಲಯಗಳ ವಿವರ

| ಕ್ರ ಸಂ | ದೇವಾಲಯದ ಹೆಸರು ಮತ್ತು ವಿಳಾಸ | ಪ್ರವರ್ಗ | ಅನುವಂಶಿಕ ಮೊಕ್ತೇಸರರು/ ಆಡಳಿತ ಮೊಕ್ತೇಸರರು |
|---|---|---|---|
| | **ದಕ್ಷಿಣ ಕನ್ನಡ ಜಿಲ್ಲೆ** | | |
| 1. | ಶ್ರೀ ಅನಂತಪದ್ಮನಾಭ ದೇವಸ್ಥಾನ, ಕುಡುಪು, ಮಂಗಳೂರು ತಾಲೂಕು. | "ಎ" | 1) ಶ್ರೀ ಕೆ.ನರಸಿಂಹ ತಂತ್ರಿ<br>2) ಶ್ರೀ ಮನೋಹರ ಕುಡುಪು<br>3) ಶ್ರೀ ಕೆ. ಬಾಲಕೃಷ್ಣ ಕಾರಂತ |
| 2. | ಶ್ರೀ ಮಂಗಳಾದೇವಿ ದೇವಸ್ಥಾನ, ಬೋಳಾರ, ಮಂಗಳೂರು ತಾಲೂಕು | "ಎ" | 1) ಶ್ರೀ ಜಿ. ರಘುರಾಮ್ ಉಪಾದ್ಯಾಯ<br>2) ಎಸ್, ಹರೀಶ್ ಐತಾಳ್.<br>3) ಎಂ. ಅರುಣ್ ಕುಮಾರ್. |
| 3. | ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ, ಬಪ್ಪನಾಡು | "ಎ" | 1. ಶ್ರೀ ಎನ್.ಎಸ್. ಮನೋಹರ್ ಶೆಟ್ಟಿ<br>2. ಶ್ರೀ ದುಗ್ಗಣ್ಣ ಸಾವಂತರು |
| 4. | ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ, ಕಟೀಲು | "ಎ" | 1. ಶ್ರೀ ವಾಸುದೇವ ಅಸ್ರಣ್ಣ.<br>2. ದಿವಗಂತ ರವೀಂದ್ರನಾಥ ಪೂಂಜ ಅವರ ತೆರವಾದ ಸ್ಥಾನಕ್ಕೆ ದಾಖಲಾತಿ ಆಗಿರುವುದಿಲ್ಲ. |
| 5. | ಶ್ರೀ ಚಿತ್ರಾಪುರ ದುರ್ಗಾಪರಮೇಶ್ವರಿ ದೇವಸ್ಥಾನ, ಕುಳಾಯಿ | "ಎ" | ಶ್ರೀ ವಿದ್ಯೇಂದ್ರ ತೀರ್ಥ ಶ್ರೀಪಾದರು |
| 6. | ಶ್ರೀ ಕೊಡಮಣಿತ್ತಾಯ ದೇವಾಲಯ | "ಎ" | ಶ್ರೀ ವಾಸುದೇವ ಶಿಬರಾಯ |
| 7. | ಶ್ರೀ ಸೋಮನಾಥ ದೇವಸ್ಥಾನ, ಪುತ್ತಿಗೆ | "ಎ" | ಶ್ರೀ ಕುಲದೀಪ್ ಚೌಟ. |
| 8. | ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಇಡ್ಯಾ, ಸುರತ್ಕಲ್ | "ಎ" | ಶ್ರೀ ಐ. ರಮಾನಂಧ ಭಟ್. |
| 9. | ಶ್ರೀ ಪಂಚಲಿಂಗೇಶ್ವರ ದೇವಸ್ಥಾನ, ವಿಟ್ಲ, ಬಂಟ್ವಾಳ ತಾಲೂಕು | "ಎ" | ಶ್ರೀ ಬಂಗಾರು ಬಳ್ಳಾಲ್ |
| 10. | ಪೊಳಲಿ ಶ್ರೀ ರಾಜರಾಜೇಶ್ವರಿ ದೇವಸ್ಥಾನ, ಬಂಟ್ವಾಳ ತಾಲೂಕು | "ಎ" | 1) ಡಾ. ಎ, ಮಂಜಯ್ಯ ಶೆಟ್ಟಿ<br>2) ಯು.ತಾರಾನಾಥ್ ಆಳ್ವ.<br>3) ಚೇರ ಸೂರ್ಯನಾರಾಯಣ ಆಳ್ವ.<br>4) ಪಿ.ಮಾಧವ ಭಟ್. |
| 11. | ಶ್ರೀ ಅನಂತೇಶ್ವರ ದೇವಸ್ಥಾನ, ಬಳಮಂಜ, ಮಚ್ಚಿನ, ಬೆಳ್ತಂಗಡಿ ತಾಲ್ಲೂಕು | "ಎ" | ಶ್ರೀ ಶ್ರೀಪತಿ ಸಂಪಿಗೆತ್ತಾಯ |
| 12. | ಶ್ರೀ ಸೋಮನಾಥ ದೇವಸ್ಥಾನ, ಕುತ್ಯಾರು , ಬೆಳ್ತಂಗಡಿ ತಾಲ್ಲೂಕು | "ಎ" | ಶ್ರೀ ಜಯವರ್ಮ ಬಲ್ಲಾಳ್. |
| 13. | ಶ್ರೀ ಚೆನ್ನಕೇಶವ ದೇವಸ್ಥಾನ, ಸುಳ್ಯ ತಾಲ್ಲೂಕು | "ಎ" | ಡಾ. ಶ್ರೀ ಹರಪ್ರಸಾದ್ ತುದಿಯಡ್ಕ. |
| 14. | ಶ್ರೀ ಸದಾಶಿವ ಮಹಾಗಣಪತಿ ದೇವಸ್ಥಾನ, ಸುರತ್ಕಲ್, ಮಂಗಳೂರು ತಾಲೂಕು | "ಬಿ" | ಶ್ರೀ ದಾಸಮಯ್ಯ ಅವರ ನಿಧನದಿಂದ ತೆರವಾದ ಸ್ಥಾನಕ್ಕೆ ಇದುವರೆಗೆ ಉತ್ತರಾಧಿಕಾರಿ ದಾಖಲಾತಿ ಆಗಿರುವುದಿಲ್ಲ. |
| 15. | ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಕುಳಾಯಿ, ಮಂಗಳೂರು ತಾಲೂಕು | "ಬಿ" | ಶ್ರೀ ಕೃಷ್ಣ ಹೆಬ್ಬಾರ್ |
| 16. | ಶ್ರೀ ಕೊಡಮಂತ್ತಾಯ ದೈವಸ್ಥಾನ, ಎಕ್ಕಾರು, ಮಂಗಳೂರು ತಾಲೂಕು | "ಬಿ" | ಶ್ರೀ ನಿತಿನ್ ಹೆಗ್ಡೆ ಯಾನೆ ದುರ್ಗಾದಾಸ್ |
| 17. | ಕಾಂತೇರಿ ಧೂಮಾವತಿ ದೈವಸ್ಥಾನ, ಪಣಂಬೂರು, ಇಡ್ಯಾ, ಸುರತ್ಕಲ್, ಮಂಗಳೂರು ತಾಲೂಕು | "ಬಿ" | ಶ್ರೀ ಪಿ.ಟಿ. ರೈ |

| | | | |
|---|---|---|---|
| 18. | ಮಿತ್ತನಡ್ಕ ಶ್ರೀ ಮಲರಾಯ ದೈವಸ್ಥಾನ ಮತ್ತು ವಗೆನಾಡು ಶ್ರೀ ಸುಬ್ರಾಯ ದೈವಸ್ಥಾನ, ಕರೋಪಾಡಿ ಗ್ರಾಮ | "ಬಿ" | ಶ್ರೀ ತಿರುಮಲೇಶ್ ಭಟ್ |
| 19. | ಅಮ್ಮುಂಬಳ ಶ್ರೀ ಸೋಮನಾಥೇಶ್ವರ ದೇವಸ್ಥಾನ, ಕುರ್ನಾಡು, ಬಂಟ್ವಾಳ ತಾ | "ಬಿ" | ಹೆಚ್. ಬಾಲಕೃಷ್ಣ ನಾಯ್ಕ್ |
| 20. | ಶ್ರೀ ಜನಾರ್ಧನ ದೇವಸ್ಥಾನ, ಉಜಿರೆ, ಬೆಳ್ತಂಗಡಿ ತಾಲ್ಲೂಕು | "ಬಿ" | ಶ್ರೀ ವಿಜಯ ರಾಘವ ಪಡುವೆಟ್ನಾಯ |
| 21. | ಶ್ರೀ ಕೋಟೆ ಸುಬ್ರಹ್ಮಣ್ಯ ದೇವಸ್ಥಾನ, ಕಳಂಜ, ಸುಳ್ಯ ತಾಲ್ಲೂಕು | "ಬಿ" | 1. ಶ್ರೀ ಕೋಟೆ ಲಕ್ಷ್ಮೀ ನಾರಾಯಣ.<br>2. ಶ್ರೀ ವಾರಣಾಸಿ ಸೀತಾರಾಮಯ್ಯ.<br>3. ಶ್ರೀ ಕೆ.ಎಂ. ನಾರಾಯಣ ಭಟ್ |
| 22. | ಶ್ರೀ ಮುಂಡಿತ್ತಾಯ ದೈವಸ್ಥಾನ, ಅತ್ತಾವರ, ಮಂಗಳೂರು ತಾಲ್ಲೂಕು | "ಸಿ" | ಶ್ರೀ ವಿದ್ಯಾಧರ |
| 23. | ಶ್ರೀ ಮಲರಾಯ ದೇವಸ್ಥಾನ, ಮಂಜನಾಡಿ, ಮಂಗಳೂರು ತಾಲ್ಲೂಕು | "ಸಿ" | ಶ್ರೀ ರಾಮ್ ಮೋಹನ ಆಳ್ವ |
| 24. | ಶ್ರೀ ವಿಷ್ಣುಮೂರ್ತಿ ಜನಾರ್ಧನಾ ದೇವಸ್ಥಾನ, ಮಂಜನಾಡಿ, ಮಂಗಳೂರು ತಾ | "ಸಿ" | ಶ್ರೀ ರಾಮ್ ಮೋಹನ ಆಳ್ವ |
| 25. | ಶ್ರೀ ಮಲರಾಯ ಧೂಮಾವತಿ ಬಂಟ ದೈವಸ್ಥಾನ, ಕಿನ್ಯಾ ಬೆಳರಿಂಗೆ, ಮಂಗಳೂರು ತಾ | "ಸಿ" | ಶ್ರೀ ರಾಮಣ್ಣ ರೈ |
| 26. | ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಪಡುಪೆರಾರ್, ಮಂಗಳೂರು ತಾಲ್ಲೂಕು | "ಸಿ" | ಶ್ರೀ ಸುಬ್ರಹ್ಮಣ್ಯ ಉಡುಪ |
| 27. | ಶ್ರೀ ಗೋಪಾಲಕೃಷ್ಣ ದೇವಸ್ಥಾನ, ಬಡಗಎಡಪದವು, ಮಂಗಳೂರು ತಾ/ | "ಸಿ" | ಶ್ರೀ ವಿಷ್ಣುಮೂರ್ತಿ ಎಸ್ |
| 28. | ಶ್ರೀ ಕುಮಾರಮಂಗಿಲ ಸುಬ್ರಾಯ ದೇವಸ್ಥಾನ, ಕಿಲ್ಪಾಡಿ, ಮಂಗಳೂರು ತಾ/ | "ಸಿ" | ಶ್ರೀ ಚಂದ್ರಶೇಖರ ಮಯ್ಯ |
| 29. | ಶ್ರೀ ತ್ರಿಶೂಲೇಶ್ವರ ದೇವಸ್ಥಾನ, ಮಂಗಳೂರು ಕಸಬಾಬಜಾರ್, ಮಂಗಳೂರು ತಾಲ್ಲೂಕು | "ಸಿ" | ಶ್ರೀ ಟಿ. ಶ್ರೀನಿವಾಸ ಉಪಾಧ್ಯಾಯ |
| 30. | ಶ್ರೀ ತೋಡಕುಕ್ಕಿನಾರ ದೈವಸ್ಥಾನ, ಕಣಂತೂರು, ಬಂಟ್ವಾಳ ತಾಲೂಕು | "ಸಿ" | ಶ್ರೀ ದೇವಿಪ್ರಸಾದ್ ಪೊಯ್ಯತ್ತಾಯ |
| 31. | ಶ್ರೀ ಉಳ್ಳಾಲ್ತಿ ದೈವಸ್ಥಾನ, ಅನಂತಾಡಿ, ಬಂಟ್ವಾಳ ತಾಲೂಕು | "ಸಿ" | ಶ್ರೀ ನರೇಂದ್ರ ರೈ |
| 32. | ಶ್ರೀ ಕಣಿಯೂರು ಧೂಮಾವತಿ ದೈವಸ್ಥಾನ ಅಮ್ಮುಂಜೆ, ಬಂಟ್ವಾಳ ತಾಲೂಕು | "ಸಿ" | ಡಾ. ಮಂಜಯ್ಯ ಶೆಟ್ಟಿ |
| 33. | ಶ್ರೀ ವರದೇಶ್ವರ ದೇವಸ್ಥಾನ, ಪುದು, ಬಂಟ್ವಾಳ ತಾಲೂಕು | "ಸಿ" | ಶ್ರೀ ಪಿ. ಕೃಷ್ಣ ತಂತ್ರಿ |
| 34. | ಶ್ರೀ ಉಳ್ಳಾಲ್ತಿ ದೈವಸ್ಥಾನ, ವೀರಕಂಬ, ಬಂಟ್ವಾಳ ತಾಲೂಕು | "ಸಿ" | ಶ್ರೀ ಶಂಕರನಾರಾಯಣ ಭಟ್ |
| 35. | ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ ಕೇಪು, ಬಂಟ್ವಾಳ ತಾಲೂಕು | "ಸಿ" | ಶ್ರೀ ಬಂಗಾರು ಬಳ್ಳಾಲ್ |
| 36. | ಶ್ರೀ ಶಂಕರನಾರಾಯಣ ದೇವಸ್ಥಾನ ಯೆರುಂಬು | "ಸಿ" | ಶ್ರೀ ಬಂಗಾರು ಬಳ್ಳಾಲ್ |
| 37. | ಶ್ರೀ ಪಂಚದುರ್ಗಾಪರಮೇಶ್ವರಿ ದೇವಸ್ಥಾನ ವಿಟ್ಲ | "ಸಿ" | ಶ್ರೀ ಬಂಗಾರು ಬಳ್ಳಾಲ್ |
| 38. | ಶ್ರೀ ವಿಷ್ಣುಮಂಗಲ ವಿಷ್ಣುಮೂರ್ತಿ ದೇವಸ್ಥಾನ, ಯೆರುಂಬು, ಬಂಟ್ವಾಳ ತಾ' | "ಸಿ" | ಶ್ರೀ ಬಂಗಾರು ಬಳ್ಳಾಲ್ |
| 39. | ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಮಾಣಿಲ, ಬಂಟ್ವಾಳ ತಾಲೂಕು | "ಸಿ" | ಶ್ರೀ ಬಂಗಾರು ಬಳ್ಳಾಲ್ |

| | | | |
|---|---|---|---|
| 40. | ಶ್ರೀ ಸುಬ್ರಾಯ ದೇವಸ್ಥಾನ, ಕೇಪು, ಬಂಟ್ವಾಳ ತಾಲೂಕು | "ಸಿ" | ಶ್ರೀ ಬಂಗಾರು ಬಳ್ಳಾಲ್ |
| 41. | ಶ್ರೀ ಧೂಮಾವತಿ ದೈವಸ್ಥಾನ, ಕೇಪು, ಬಂಟ್ವಾಳ ತಾಲೂಕು | "ಸಿ" | ಶ್ರೀ ಬಂಗಾರು ಬಳ್ಳಾಲ್ |
| 42. | ಶ್ರೀ ಪಂಜುರ್ಲಿ ಭೂತ ದೇವಸ್ಥಾನ, ಪೆರುವಾಯಿ, ಬಂಟ್ವಾಳ ತಾಲೂಕು | "ಸಿ" | ಶ್ರೀ ಬಂಗಾರು ಬಳ್ಳಾಲ್ |
| 43. | ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಕುಂಡಡ್ಕ, ಬಂಟ್ವಾಳ ತಾಲೂಕು | "ಸಿ" | ಶ್ರೀ ಬಂಗಾರು ಬಳ್ಳಾಲ್ |
| 44. | ಶ್ರೀ ವೆಂಕಟ್ರಮಣ ಮತ್ತು ಪಡ್ನೂರು ವೆಂಕಟ್ರಮಣ ದೇವಸ್ಥಾನ, ವಿಟ್ಲ, ಬಂಟ್ವಾಳ ತಾಲೂಕು | "ಸಿ" | ಶ್ರೀ ಬಂಗಾರು ಬಳ್ಳಾಲ್ |
| 45. | ಶ್ರೀ ಜಠಾಧಾರಿ ದೇವರು ದೇವಸ್ಥಾನ, ವಿಟ್ಲ, ಬಂಟ್ವಾಳ ತಾಲೂಕು | "ಸಿ" | ಶ್ರೀ ಬಂಗಾರು ಬಳ್ಳಾಲ್ |
| 46. | ಶ್ರೀ ಬೈದ್ಯಾರಿ ಭಟ್ಟಾಬ್ಣಾಯ ದೇವಸ್ಥಾನ, ಕನ್ಯಾನ, ಬಂಟ್ವಾಳ ತಾಲೂಕು | "ಸಿ" | ಶ್ರೀ ಬಂಗಾರು ಬಳ್ಳಾಲ್ |
| 47. | ಶ್ರೀ ಉಮಾಮಹೇಶ್ವರಿ ದೇವಸ್ಥಾನ, ವಕ್ಕೆತ್ತೂರು, ಬಂಟ್ವಾಳ ತಾಲೂಕು | "ಸಿ" | ಶ್ರೀ ಬಂಗಾರು ಬಳ್ಳಾಲ್ |
| 48. | ಶ್ರೀ ಕಾಶಿ ವಿಶ್ವೇಶ್ವರ ದೇವಸ್ಥಾನ, ವಿಟ್ಲ, ಬಂಟ್ವಾಳ ತಾಲೂಕು | "ಸಿ" | ಶ್ರೀ ಬಂಗಾರು ಬಳ್ಳಾಲ್ |
| 49. | ಶ್ರೀ ಪಂಚಲಿಂಗೇಶ್ವರ ದೇವಸ್ಥಾನ, ಬಳಂಜೆ, ಬೆಳ್ತಂಗಡಿ ತಾಲ್ಲೂಕು | "ಸಿ" | ಶ್ರೀ ಬಿ. ಶೀತಲ್ ಪಡಿವಾಳ್ |
| 50. | ಶ್ರೀ ರಣಮಂಗಲ ಸುಬ್ರಹ್ಮಣ್ಯ , ಪಾಣಾಜೆ, ದೇವಸ್ಥಾನ, ಪುತ್ತೂರು ತಾಲ್ಲೂಕು | "ಸಿ" | ಶ್ರೀ ಕೃಷ್ಣ ಬೊಳ್ಳಿಂತ್ತಾಯ |
| 51. | ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಪುತ್ತೂರು ತಾಲ್ಲೂಕು | "ಸಿ" | ಶ್ರೀ ಅದಿತ್ಯ ಬಲ್ಲಾಲ್ |
| | **ಉಡುಪಿ ಜಿಲ್ಲೆ** | | |
| 52. | ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಪಡುಬಿದ್ರಿ, ಉಡುಪಿ ತಾಲೂಕು | "ಎ" | ಶ್ರೀ ಭವಾನಿಶಂಕರ ಹೆಗ್ಡೆ |
| 53. | ಶ್ರೀ ಜನಾರ್ಧನ ಮತ್ತು ಮಹಾಕಾಳಿ ದೇವಸ್ಥಾನ ಅಂಬಲಪಾಡಿ, ಉಡುಪಿ ತಾಲೂಕು | "ಎ" | ಉತ್ತರಾಧಿಕಾರಿ ನೇಮಕಾತಿ ಪ್ರಕ್ರಿಯೆಯಲ್ಲಿದೆ |
| 54. | ಶ್ರೀ ಬ್ರಾಹ್ಮೀ ದುರ್ಗಾಪರಮೇಶ್ವರೀ ದೇವಸ್ಥಾನ, ಕಮಲಶಿಲೆ, ಕುಂದಾಪುರ ತಾ/ | "ಎ" | ಶ್ರೀ ಸಚ್ಚಿದಾನಂದ ಚಾತ್ರ, ಶ್ರೀ ಚಂದ್ರಶೇಖರ ಶೆಟ್ಟಿ |
| 55. | ಮಾರಣಕಟ್ಟೆ ಶ್ರೀ ಬ್ರಹ್ಮಲಿಂಗೇಶ್ವರ ದೇವಸ್ಥಾನ, ಚಿತ್ತೂರು, ಕುಂದಾಪುರ ತಾ/ | "ಎ" | ಸದಾಶಿವ ಶೆಟ್ಟಿ |
| 56. | ಶ್ರೀ ಶಂಕರ ನಾರಾಯಣ ದೇವಸ್ಥಾನ , ಶಂಕರನಾರಾಯಣ, ಕುಂದಾಪುರ ತಾಲೂಕು | "ಎ" | ಶ್ರೀ ಲಕ್ಷ್ಮೀನಾರಾಯಣ ಉಡುಪ |
| 57. | ಶ್ರೀ ಮಾರಿಯಮ್ಮ ದೇವಸ್ಥಾನ, ಕಾರ್ಕಳ ತಾ/ | "ಎ" | ಉತ್ತರಾಧಿಕಾರಿ ನೇಮಕಾತಿ ಪ್ರಕ್ರಿಯೆಯಲ್ಲಿದೆ |
| 58. | ಶ್ರೀ ಮಹಿಷಮರ್ಧಿನಿ ದೇವಸ್ಥಾನ, ನೀಲಾವರ, ಬ್ರಹ್ಮಾವರ ತಾಲೂಕು | "ಎ" | ಶ್ರೀ ರಘುರಾಮ ಮಧ್ಯಸ್ಥ |
| 59. | ಗುಡ್ಡಮ್ಮಾಡಿ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಸೇನಾಪುರ, ಕುಂದಾಪುರ ತಾ/ | "ಎ" | ಶ್ರೀ ಅರುಣ್‌ಕುಮಾರ್ ಶೆಟ್ಟಿ |
| 60. | ಗುಡ್ಡೆಟ್ಟು ,ಶ್ರೀ ವಿನಾಯಕ ದೇವಸ್ಥಾನ ಯಡಾಡಿ-ಮತ್ಯಾಡಿ, ಕುಂದಾಪುರ ತಾ/ | "ಎ" | ಶ್ರೀ ಅನಂತಪದ್ಮನಾಭ ಅಡಿಗ |
| 61. | ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಕುಂಭಾಸಿ, ಕುಂದಾಪುರ ತಾಲೂಕು | "ಬಿ" | ಶ್ರೀ ವೆಂಕಟೇಶ್ ಭಟ್, ಇವರು ಮೃತರಾಗಿದ್ದು, ಶ್ರೀ ಎಂ. ಜಿ ಲಕ್ಷ್ಮೀನಾರಾಯಣ ಭಟ್, ಇವರನ್ನು ಫಿಟ್ ಪರ್ಸನ್ ಆಗಿ ನೇಮಿಸಲಾಗಿರುತ್ತದೆ. |
| 62. | ಕೆಮ್ಮಣ್ಣು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ, ನಿಟ್ಟೆ, ಕಾರ್ಕಳ ತಾಲೂಕು | "ಬಿ" | ಡಾ. ರಮಾನಂದ ಶೆಟ್ಟಿ |

| | | | |
|---|---|---|---|
| 63. | ನಾಡ್ಪಾಲ್ ಶ್ರೀ ಮಹಾಗಣಪತಿ ದೇವಸ್ಥಾನ, ಸೋಮೇಶ್ವರ, ಕಾರ್ಕಳ ತಾಲೂಕು | "ಬಿ" | ಪಳ್ಳಿ ಶ್ರೀ ರಾಮರತನ್ ಹೆಗ್ಡೆ, ಇವರು ಮೃತರಾಗಿದ್ದು, ಉತ್ತರಾಧಿಕಾರಿನೇಮಕಾತಿ ಪ್ರಕ್ರಿಯೆಯಲ್ಲಿದೆ. |
| 64. | ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ, ಅಲೆವೂರು, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ. | "ಸಿ" | ಡಾ. ಕೆ. ಕೃಷ್ಣರಾಜ್ ಭಟ್ |
| 65. | ಶ್ರೀ ವಡಭಾಂಡ ಬಲರಾಮ ದೇವಸ್ಥಾನ, ಮಲ್ಪೆ, ಉಡುಪಿ ತಾಲ್ಲೂಕು, ಉಡುಪಿ ಜಿ. | "ಸಿ" | ಶ್ರೀ ಶ್ರೀನಿವಾಸ ಭಟ್ |
| 66. | ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಕುತ್ಪಾಡಿ, ಉಡುಪಿ ತಾಲ್ಲೂಕು, ಉಡುಪಿ ಜಿ. | "ಸಿ" | ಶ್ರೀ ಬಾಲಕೃಷ್ಣ ಭಟ್ |
| 67. | ಶ್ರೀ ಕಂಚಯ್ಯನ ಮಹಾಲಿಂಗೇಶ್ವರ ದೇವಸ್ಥಾನ, ಕಲ್ಯಾಣಪುರ, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ. | "ಸಿ" | ಶ್ರೀ ಕೆ.ವಿ.ರಾವ್ |
| 68. | ಶ್ರೀ ವಿನಾಯಕ ದೇವಸ್ಥಾನ, ಅಂಬಲಪಾಡಿ, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ. | "ಸಿ" | ಶ್ರೀ ವಿಜಯ ಬಲ್ಲಾಳ್ |
| 69. | ಶ್ರೀ ಜನಾರ್ಧನ ದೇವಸ್ಥಾನ, ಎರ್ಮಾಳು, ಕಾಪು ತಾಲ್ಲೂಕು, ಉಡುಪಿ ಜಿಲ್ಲೆ. | "ಸಿ" | ಶ್ರೀ ಅಶೋಕ್‌ರಾಜ್ |
| 70. | ಶ್ರೀ ಕೋಡಿ ಚಕ್ರಮ್ಮ ದೇವಸ್ಥಾನ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ. | "ಸಿ" | ಶ್ರೀ ಪಂಜು ಆರ್. ಪೂಜಾರಿ |
| 71. | ಶ್ರೀ ಕಾಂತೇಶ್ವರ ದೇವಸ್ಥಾನ, ಕಾಂತಾವರ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ. | "ಸಿ" | ಶ್ರೀ ಜೀವಂದರ ಬಲ್ಲಾಳ್ |
| 72. | ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ನಂದಳಿಕೆ, ಕಾರ್ಕಳ ತಾಲ್ಲೂಕು, ಉಡುಪಿ ಜಿ. | "ಸಿ" | ಶ್ರೀ ಸುಹಾಸ್ ಶೆಟ್ಟಿ |
| 73. | ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಸೂಡ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ. | "ಸಿ" | ಶ್ರೀ ಜಯಶೀಲ ಹೆಗ್ಡೆ |
| 74. | ಕೊಡಂಗಳ ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಮಣಿಪುರ | "ಸಿ" | ಶ್ರೀ ಮುರಳೀಧರ ಭಟ್, ಶ್ರೀ ಗುರುನಾರಾಯಣ ಸರಳಾಯ, ಶ್ರೀ ಗಣೇಶ್‌ಆಚಾರ್ಯ |

## ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:735 ಅನುಬಂಧ-2

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಧಾರ್ಮಿಕ ದತ್ತಿ ಇಲಾಖಾ ಆಡಳಿತಕ್ಕೆ ಒಳಪಡುವ ದೇವಾಲಯಗಳಿಗೆ ಸಾಮಾನ್ಯ ಯೋಜನೆಡಿ ಬಿಡುಗಡೆ ಮಾಡಿರುವ ಅನುದಾನದ ವಿವರ

**2019-20 ನೇ ಸಾಲಿನ ದ.ಕ. ಜಿಲ್ಲೆಯ ಮುಜರಾಯಿ ದೇವಸ್ಥಾನಗಳಿಗೆ ಸಾಮಾನ್ಯ ಯೋಜನೆಯಡಿಬಿಡುಗಡೆಯಾದ ಅನುದಾನದ ವಿವರ**

| ಕ್ರ ಸಂ | ದೇವಸ್ಥಾನದ ಹೆಸರು ಮತ್ತು ವಿಳಾಸ | ತಾಲ್ಲೂಕು | ಮಂಜೂರಾದ ಅನುದಾನದ ಮೊತ್ತ |
|---|---|---|---|
| 1 | 2 | 3 | 4 |
| 1 | ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಪಾಣಾಜೆ ಗ್ರಾಮ, ರಣಮಂಗಲ, ಪುತ್ತೂರು ತಾಲೂಕು. | ಪುತ್ತೂರು | 500000 |
| 2 | ಶ್ರೀ ಧರ್ಮ ಅರಸು ತೋಡಕುಕ್ಕಿನಾರ್ ದೈವಸ್ಥಾನ, ಕಣಂತೂರು, ಬಾಳೆಪುಣಿ, ಬಂಟ್ವಾಳ ತಾಲೂಕು. | ಬಂಟ್ವಾಳ | 500000 |
| 3 | ಶ್ರೀ ದುರ್ಗಾಪರಮೇಶ್ವರಿ (ಉಳ್ಳಾಲ್ತಿ) ದೇವಸ್ಥಾನ, ಕೇಪು, ಅಳಕೆ, ಬಂಟ್ವಾಳ ತಾಲೂಕು. | ಬಂಟ್ವಾಳ | 300000 |
| 4 | ಇಡ್ಯಾ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಮಂಗಳೂರು ತಾಲೂಕು | ಮಂಗಳೂರು | 800000 |
| 5 | ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನ, ಇಡ್ಯಾ, ಸುರತ್ಕಲ್, ಮಂಗಳೂರು ತಾಲೂಕು | ಮಂಗಳೂರು | 800000 |
| | **ಒಟ್ಟು** | | **2900000** |

**2020-21ನೇ ಸಾಲಿನ ದ.ಕ. ಜಿಲ್ಲೆಯ ಮುಜರಾಯಿ ದೇವಸ್ಥಾನಗಳಿಗೆ ಸಾಮಾನ್ಯ ಯೋಜನೆಯಡಿಬಿಡುಗಡೆಯಾದ ಅನುದಾನದ ವಿವರ**

| ಕ್ರ ಸಂ | ದೇವಸ್ಥಾನದ ಹೆಸರು ಮತ್ತು ವಿಳಾಸ | ತಾಲ್ಲೂಕು | ಮಂಜೂರಾದ ಅನುದಾನದ ಮೊತ್ತ |
|---|---|---|---|
| 1 | 2 | 3 | 4 |
| | ಇರುವುದಿಲ್ಲ | | |

**2021-22ನೇ ಸಾಲಿನ ದ.ಕ. ಜಿಲ್ಲೆಯ ಮುಜರಾಯಿ ದೇವಸ್ಥಾನಗಳಿಗೆ ಸಾಮಾನ್ಯ ಯೋಜನೆಯಡಿಬಿಡುಗಡೆಯಾದ ಅನುದಾನದ ವಿವರ**

| ಕ್ರ ಸಂ | ದೇವಸ್ಥಾನದ ಹೆಸರು ಮತ್ತು ವಿಳಾಸ | ತಾಲ್ಲೂಕು | ಮಂಜೂರಾದ ಅನುದಾನದ ಮೊತ್ತ |
|---|---|---|---|
| 1 | 2 | 3 | 4 |
| ಇರುವುದಿಲ್ಲ | | | |

| 2022-23ನೇ ಸಾಲಿನ ಉಡುಉಪಿ. ಜಿಲ್ಲೆಯ ಮುಜರಾಯಿ ದೇವಸ್ಥಾನಗಳಿಗೆ ಸಾಮಾನ್ಯ ಯೋಜನೆಯಡಿಬಿಡುಗಡೆಯಾದ ಅನುದಾನದ ವಿವರ | | | |
|---|---|---|---|
| ಕ್ರ ಸಂ | ದೇವಸ್ಥಾನದ ಹೆಸರು ಮತ್ತು ವಿಳಾಸ | ತಾಲ್ಲೂಕು | ಬಿಡುಗಡೆಯಾದ ಅನುದಾನದ ಮೊತ್ತ |
| | | | ರೂ,ಲಕ್ಷಗಳಲ್ಲಿ |
| 1 | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಚಿತ್ರಾಪುರ ದುರ್ಗಾಪರಮೇಶ್ವರಿ ದೇವಸ್ಥಾನ, ಇದರ ಅಭಿವೃದ್ಧಿ ಕಾಮಗಾರಿ. | ಮಂಗಳೂರು | 7.50 |
| 2 | ಮಂಗಳೂರು ತಾಲೂಕು ಪಡುಪೆರಾರ ಗ್ರಾಮ ಪಂಚಾಯತ್ ವ್ಯಾಪ್ತಿಯ ಕತ್ತಲ್ ಸಾರ್ ಪಡುಪೆರಾರು ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಇದರ ಅಭಿವೃದ್ಧಿ ಕಾಮಗಾರಿ. | ಮಂಗಳೂರು | 2.50 |
| 3 | 44 ನೇ ಬಂದರು ವಾರ್ಡಿನ ಬಜಿಲಕೇರಿಯ ಶ್ರೀ ಹನುಮಾನ್ ದೇವಸ್ಥಾನ ಅಭಿವೃದ್ಧಿ. | ಮಂಗಳೂರು | 2.00 |
| 4 | ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಬೆಟ್ಟಂಪಾಡಿ ಗ್ರಾಮ, ಪುತ್ತೂರು | ಪುತ್ತೂರು | 5.00 |

| 2019-20, 2020-21, 2021-22, 2022-23ನೇ ಸಾಲಿನ ದ.ಕ. ಜಿಲ್ಲೆಯ ಮುಜರಾಯಿ ದೇವಸ್ಥಾನಗಳಿಗೆ ಸಾಮಾನ್ಯ ಯೋಜನೆಯಡಿಬಿಡುಗಡೆಯಾದ ಅನುದಾನದ ವಿವರ | | | |
|---|---|---|---|
| ಕ್ರ ಸಂ | ದೇವಸ್ಥಾನದ ಹೆಸರು ಮತ್ತು ವಿಳಾಸ | ತಾಲ್ಲೂಕು | ಬಿಡುಗಡೆಯಾದ ಅನುದಾನದ ಮೊತ್ತ |
| | | | ರೂ,ಲಕ್ಷಗಳಲ್ಲಿ |
| 1 | ಶ್ರೀ ಮಾರಿಯಮ್ಮ ದೇವಾಲಯ, ಕಾರ್ಕಳ | ಕಾರ್ಕಳ | 100.00 |